**ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು.**

ದಿಃ22-04-2026

**ಮುಖ್ಯ ವಿಚಾರಣೆಃ 2 ನೇ ಪ್ರತಿವಾದಿ ಪರ ಶ್ರೀ ಜೆ ಪಿ ಎಸ್ ವಕೀಲರಿಂದ**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರವನ್ನು ನನಗೆ ಓದಿ ಹೇಳಲಾಗಿದ್ದು ಅದನ್ನು ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ಸಾಕ್ಷಿಯು ನಿ ಡಿ 6 ರಲ್ಲಿನ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು, ಅದನ್ನು ನಿ ಡಿ 6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಮತ್ತೊಂದು ಎಡಭಾಗದ ಹೆಬ್ಬೆಟ್ಟನ್ನು ನೋಡಿ ಗುರುತಿಸಿದ್ದು ಅದು ಮಹದೇವಮ್ಮ ರವರ ಹೆಬ್ಬೆಟ್ಟಿನ ಗುರುತು ಎಂದು ನುಡಿಯುತ್ತಾರೆ. ಅದನ್ನು ನಿ ಡಿ 6 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಬಲಭಾಗದ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿದ್ದು , ಅದು ಮಂಜಮ್ಮ ರವರ ಹೆಬ್ಬೆಟ್ಟಿನ ಗುರುತು ಎಂದು ನುಡಿಯುತ್ತಾರೆ. ಅದನ್ನು ನಿ ಡಿ 6 ಸಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್ ವಿ ಎಸ್ ವಕೀಲರಿಂದ**

ನನಗೆ ವಾದಿಯ ಕುಟುಂಬ ಬಗ್ಗೆ ಗೊತ್ತಿರುತ್ತದೆ. ವಾದಿಯ ತಂದೆಯ ಹೆಸರು ಜವರೇಗೌಡರ ಎಂದು ಇರುತ್ತದೆ. ಜವರೇಗೌಡರಿಗೆ ಇಬ್ಬರು ಮಕ್ಕಳು. ಜವರೇಗೌಡರಿಗೆ ಚಿರಂತನ್ ಮತ್ತು ಭಾಗ್ಯ ಎಂಬ ಇಬ್ಬರು ಮಕ್ಕಳು ಇರುತ್ತಾರೆ. ನಿಂಗಮ್ಮ ರವರ ಆಸ್ತಿಯ ವಿವರಗಳು ಗೊತ್ತಿಲ್ಲ. ನಿಂಗಮ್ಮ ರವರಿಗೆ ಪುರಸಭೆಯಿಂದ ಆಸ್ತಿ ಮಂಜೂರಾಗಿರುತ್ತದೆ. ನಮಗೆ ಆಸ್ತಿ ಮಂಜೂರಾದ ಸಮಯದಲ್ಲಿ ಅವರಿಗೂ ಮಂಜೂರಾಗಿರುತ್ತದೆ. ಆದರೆ ದಿನಾಂಕ ಗೊತ್ತಿಲ್ಲ. ನನಗೆ ಮಂಜೂರಾದ ಆಸ್ತಿಯ ಸಂಖ್ಯೆ ಮತ್ತು ದಿನಾಂಕ ಗೊತ್ತಿಲ್ಲ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಜವರೇಗೌಡ ಮತ್ತು ನಿಂಗಮ್ಮ ರವರ ವಂಶವೃಕ್ಷವನ್ನು ನೋಡಿರುವುದಿಲ್ಲ. ಅವರ ಕುಟುಂಬದ ಆಸ್ತಿ ದಾಖಲಾತಿಗಳನ್ನು ನೋಡಿಲ್ಲ.

ನಿ ಡಿ 6 ನ್ನು ಮಂಜ ಎಂಬುವವರು ಬರೆದಿರುತ್ತಾರೆ. ಆದರೆ ದಿನಾಂಕ ಗೊತ್ತಿಲ್ಲ. ಮಂಜರವರ ತಂದೆಯ ಹೆಸರು ಗೊತ್ತಿಲ್ಲ. ಮಂಜ ಎಂಬುವವರು 12 ವರ್ಷದ ಹುಡುಗನಿದ್ದು ಅವರು ಬರೆದಿರುತ್ತಾರೆ. ನಿ ಡಿ 6 ರಲ್ಲಿ ಇರುವ ವಿಚಾರ ನನಗೆ ಗೊತ್ತಿಲ್ಲ. ಆದರೆ ಅವರು ಓದಿ ತಿಳಿಸಿರುತ್ತಾರೆ. ನಿ ಡಿ 6 ನ್ನು ನಿಂಗಮ್ಮ ರವರು ಬರೆಸಿರುತ್ತಾರೆ. ಆಗ ಸಮಯ ಮಧ್ಯಾಹ್ನ 2 ಗಂಟೆಯಾಗಿತ್ತು. ಆ ಸಮಯದಲ್ಲಿ ನಾನು, ಚಂದ್ರೇಗೌಡ, ನಿಂಗಮ್ಮ, ಜವರೇಗೌಡರು, ಬಸವರಾಜು ರವರು ಇದ್ದರು. ನಿ ಡಿ 6ಕ್ಕೆ ಚಂದ್ರೇಗೌಡ ಮತ್ತು ಬಸವರಾಜು ರವರ ಸಹಿ ಮಾಡಿರುವ ವಿಚಾರ ಗೊತ್ತಿಲ್ಲ. ನಿ ಡಿ 6 ಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆಂದು ಗೊತ್ತಿಲ್ಲ. ನಾನು ಬೇಗ ಮನೆಗೆ ಹೋದ ಕಾರಣ ಯಾರು ಯಾರು ಸಹಿ ಮಾಡಿರುತ್ತಾರೆಂದು ಗೊತ್ತಿಲ್ಲ. ನಾನು ಈ ದಿನ ಚಿರಂತನ್ ರವರ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಿ ಡಿ 6 ರಲ್ಲಿ ನಮೂದಿಸಿರುವ ಸಹಿಗಳು ಗೊತ್ತಾಗುತ್ತದೆ. 2 ನೇ ಪ್ರತಿವಾದಿ ಹೇಳಿಕೊಟ್ಟ ಹಾಗೇ ನಾನು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಯಾವುದೇ ಕ್ರಯ ಪತ್ರ, ವಿಲ್ ಇತ್ಯಾದಿ ಪತ್ರಗಳನ್ನು ದಸ್ತುರರ ಬಳಿ ಬರೆಸುತ್ತಾರೆಂದರೆ ಸರಿ. 2 ನೇ ಪ್ರತಿವಾದಿ ನಿ ಡಿ 6 ನ್ನು ಸೃಷ್ಟಿಸಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. 12 ವರ್ಷದ ಬಾಲಕ ಮಂಜನಿಗೆ ಬರೆಯಲು ಗೊತ್ತಿರುವುದಿಲ್ಲ ಮತ್ತು ಕಾನೂನಿನಲ್ಲಿ ಅವಕಾಶ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಮಾಹಿತಿಗಳು ನನಗೆ ಗೊತ್ತಿಲ್ಲ. ಜವರೇಗೌಡರಿಗೆ ಚಿರಂತನ್ ಎಂಬ ಮಗ ಇರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೇ ಕೇ ಸ ಇ**

ಸಹಿ/-

ಸಿ/ಸಿ **1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**